ನೋಡಿ. ಪ್ರಶ್ನೋತ್ತರ ವೇಳೆಯಾದ ತಕ್ಷಣ ಕೊಡುತ್ತೇನೆ. ಈಗ ಪ್ರಶ್ನೋತ್ತರ. ಮೊದಲನೆ ಪ್ರಶ್ನೆ ಸುನೀಲ್ ವಿ.ಹೆಗಡೆಯವರು, ಕೇಳಿ.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಜೊಯಿಡಾ ತಾಲ್ಲೂಕಿನಲ್ಲಿ ಪಟ್ಟಣ ಪಂಚಾಯ್ತಿ ರಚನೆ ಬಗ್ಗೆ.

46(387) ಶ್ರೀ.ಸುನೀಲ್ ವಿ.ಹೆಗಡೆ(ಹಳಿಯಾಳ್)

ಶ್ರೀ ಎಸ್.ಸುರೇಶ್‌ಕುಮಾರ್ (ಪೌರಾಡಳಿತ ಸಚಿವರು)

ಅ. ಜೋಯಿಡಾ ತಾಲ್ಲೂಕಿನಲ್ಲಿ ಪಟ್ಟಣ ಪಂಚಾಯತಿಯನ್ನು ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ

ಆ. ಹಾಗಿದ್ದಲ್ಲಿ, ಎಂದಿನಿಂದ ಇದನ್ನು ಜಾರಿಗೆ ತರಲಾಗುವುದು;

ಉದ್ಭವಿಸುವುದಿಲ್ಲ

ಇ. ಪಟ್ಟಣ ಪಂಚಾಯಿತಿಯನ್ನು ರಚಿಸಲು ಸರ್ಕಾರ ಜನಸಂಖ್ಯೆ ಆಧಾರವನ್ನು ನಿಗಧಿಪಡಿಸಿದೆಯೇ;

ಹೌದು

ಈ. ಹಾಗಿದ್ದಲ್ಲಿ, ಎಷ್ಟು ಜನಸಂಖ್ಯೆಗೆ ಒಂದು ಪಟ್ಟಣ ಪಂಚಾಯಿತಿಯನ್ನು ರಚಿಸಲಾಗುವುದು;

ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3ರ ಉಪ ಕಲಂ (1)ರ (ಎ) (ಬಿ) (ಸಿ) (ಡಿ) (ಇ) ಮತ್ತು (ಎಫ್) ಮತ್ತು ಕಲಂ 9ರಲ್ಲಿ ಓದಿಕೊಂಡಂತೆ ಕಲಂ 349ರನ್ವಯ ಯಾವುದೇ ಒಂದು ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಲು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1. ಅಂತಹ ಪ್ರದೇಶದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವುದನ್ನು;

2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕು ನೂರಕ್ಕಿಂತ ಕಡಿಮೆಯಿಲ್ಲದಿರುವುದನ್ನು;

3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದನ್ನು.

ಯಾವುದೇ ಒಂದು ಪ್ರದೇಶವು ತಾಲ್ಲೂಕ್ ಕೇಂದ್ರ ಸ್ಥಳವಾಗಿದ್ದಲ್ಲಿ ಅಂತಹ ಸ್ಥಳದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇದ್ದಾಗ್ಯೂಸಹ ರಾಜ್ಯಪಾಲರು ಅಂತಹ ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಬಹುದಾಗಿದೆ.

ಉ. ಜೋಯಿಡಾ ಪಟ್ಟಣವು 10 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವುದು ನಿಜವಲ್ಲವೇ;

ಜೋಯಿಡಾ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 2001ರ ಜನಗಣತಿ ಪ್ರಕಾರ 2904 ಜನಸಂಖ್ಯೆ ಇರುತ್ತದೆ.

ಊ. ಹಾಗಿದ್ದಲ್ಲಿ, ಜೋಯಿಡಾದಲ್ಲಿ ಪಟ್ಟಣ ಪಂಚಾಯಿತಿಯನ್ನು ರಚಿಸಲು ಇರುವ ತೊಂದರೆಗಳೇನು; (ವಿವರಗಳನ್ನು ನೀಡುವುದು)?

ಸರ್ಕಾರವು ಈ ಪ್ರಸ್ತಾವನೆಯನ್ನು ಈ ಮೇಲೆ ಪ್ರಶ್ನೆ 'ಈ' ರಲ್ಲಿ ತಿಳಿಸಿರುವ ನಿಯಮಗಳನ್ವಯ ಪರಿಶೀಲಿಸಲಾಗುವುದು.

ಶ್ರೀ ಸುನೀಲ್ ವಿ.ಹೆಗಡೆ : ಮಾನ್ಯ ಅಧ್ಯಕ್ಷರೆ, ಜೋಯಿಡಾ ತಾಲ್ಲೂಕು ನಂಜುಂಡಪ್ಪ ವರದಿಯಲ್ಲಿ ಹಿಂದುಳಿದ ತಾಲ್ಲೂಕು ಎಂದು ಕನ್ಸಿಡರ್ ಮಾಡಿದ್ದಾರೆ. ನನಗೆ ಅನ್ನಿಸುತ್ತದೆ, ಇಡೀ ಕರ್ನಾಟಕ ರಾಜ್ಯದಲ್ಲಿ ಜೋಯಿಡಾ ತಾಲ್ಲೂಕಿನ ಹಾಗೆ ಬೇರೆ ಯಾವುದೇ ತಾಲ್ಲೂಕಿನಲ್ಲಿ ಒಂದು ಪಟ್ಟಣ ಪಂಚಾಯಿತಿ ಇರಲಿ, ಪುರಸಭೆ ಇರಲಿ, ಇದು ಯಾವುದೇ ಇಲ್ಲ ಎಂದರೆ ಅದು ಜೋಯಿಡಾ ತಾಲ್ಲೂಕು. ಸನ್ಮಾನ್ಯ ಮಂತ್ರಿಗಳು ಯಾವ ಆಧಾರದ ಮೇಲೆ ಹೊಸ ಪಟ್ಟಣ ಪಂಚಾಯಿತಿಗಳನ್ನು ಮಾಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಹತ್ತು ಸಾವಿರಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರಬೇಕು, ಪ್ರತಿ ಚದರ ಕಿ.ಮಿ.ಗೆ ನಾನೂರು ಜನಸಂಖ್ಯೆಗಿಂತ ಜಾಸ್ತಿ ಇರಬೇಕು ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, ಜೋಯಿಡಾ ತಾಲ್ಲೂಕಿನ ಶೇಕಡ 83% ರಷ್ಟು ಭಾಗ ಅರಣ್ಯ ಪ್ರದೇಶದಿಂದ ಕೂಡಿರುವುದರಿಂದ ಇಲ್ಲಿ ಜನಸಂಖ್ಯೆ ಬಹಳ scattered ಆಗಿ ಇರುವುದರಿಂದ ಮತ್ತು ಜೋಯಿಡಾ ತಾಲ್ಲೂಕು ಫ್ಲೇಸ್ ಆಗುವುದರಿಂದ ಇಲ್ಲಿ ಪಟ್ಟಣ ಪಂಚಾಯಿತಿ ಅವಶ್ಯಕತೆ ಬಹಳವಿದೆ. ಜೋಯಿಡಾ ತಾಲ್ಲೂಕು ಕೇಂದ್ರಕ್ಕೆ ಪಟ್ಟಣ ಪಂಚಾಯಿತಿ ಮಾಡಬೇಕೆಂದು ಮನವಿ ಸಹ ಕೊಟ್ಟಿದ್ದೇನೆ. ಅದೇ ರೀತಿ ಜೋಯಿಡಾ ತಾಲ್ಲೂಕಿನ ರಾಮನಗರ ಇದು ಗೋವಾ High Way ನಲ್ಲಿರುವುದರಿಂದ, 2001 ರ ಗಣತಿಯಂತೆ ನಾಲ್ಕು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆ ಇದ್ದು, ಈಗ ಅದು 5 ರಿಂದ

6 ಸಾವಿರ ಜನಸಂಖ್ಯೆಗೆ ಏರಿದೆ. ಹೀಗಾಗಿ ಜೋಯಿಡಾಕ್ಕೆ ಜನಸಂಖ್ಯೆಯ ಮಿತಿ ಸಡಿಲಗೊಳಿಸಿ, ಕೆಲವೊಂದು ಸರಕಾರದ ಕಾಯಿದೆಗಳನ್ನು ಸಡಿಲಗೊಳಿಸಿ, ರಾಮನಗರ ಒಂದು ಪಟ್ಟಣ ಪಂಚಾಯಿತಿ ಮತ್ತು ಜೋಯಿಡಾ ತಾಲ್ಲೂಕು ಕೇಂದ್ರವನ್ನು ಪಟ್ಟಣ ಪಂಚಾಯತಿಯಾಗಿ ಮಾಡಲು ಸಚಿವರು ಸಹಕರಿಸುತ್ತಾರೆಂದು ತಿಳಿಯಬಯಸುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜೋಯಿಡಾ ತಾಲ್ಲೂಕು ನಂಜುಂಡಪ್ಪವರದಿಯಲ್ಲಿ ತಿಳಿಸಿರುವಂತೆ ಹಿಂದುಳಿದ ತಾಲ್ಲೂಕು ಎಂದು ಹೇಳಿದರು. ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿಸಬೇಕಾದರೆ ಕಾನೂನಿನಲ್ಲಿ ಮೂರು ಮುಖ್ಯವಾದ ಮಾನದಂಡಗಳನ್ನು ಇಟ್ಟುಕೊಂಡು ಮಾಡಬೇಕೆಂದು ಅವಕಾಶವಿದೆ. (1) ಜನಸಂಖ್ಯೆ ಹತ್ತು ಸಾವಿರಕ್ಕಿಂತ ಮೇಲೆ ಇರಬೇಕು ಮತ್ತು 20 ಸಾವಿರದೊಳಗಡೆ ಇರಬೇಕು, ಅಂದರೆ 20 ಸಾವಿರಕ್ಕಿಂತ ಜಾಸ್ತಿ ಮೀರಿರಬಾರದು. (2) ಜನಸಂಖ್ಯೆ ಪ್ರತಿ ಚದರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕೂ ನೂರಕ್ಕಿಂತ ಕಡಿಮೆಯಿಲ್ಲದಂತೆ ಜನ ವಾಸ ಮಾಡುತ್ತಿರಬೇಕು. (3) ಕೃಷಿಯೇತರ ಅಂದರೆ non agricultural income 50% ಮೇಲೆ ಇರಬೇಕು. ಈ ಎಲ್ಲಾ ಮಾನದಂಡದಲ್ಲಿ ನಿಮ್ಮ ಜೋಯಿಡಾ ಕವರ್ ಆಗುವುದಿಲ್ಲ. ಮೊದಲನೆಯದಾಗಿ 2001 ರ ಜನಗಣತಿ ಆಧಾರದ ಪ್ರಕಾರ ತಮ್ಮಲ್ಲಿ 2900 ಜನಸಂಖ್ಯೆ ಇರುವುದರಿಂದ, ಏಕೆಂದರೆ, 10 ಸಾವಿರ ದಾಟಿರುವುದಿಲ್ಲ, ಆದರೂ ತಾವು ಹೇಳಿದ ಹಾಗೆ ನಂಜುಂಡಪ್ಪ ವರದಿಯಲ್ಲಿ ತಮ್ಮ ತಾಲ್ಲೂಕು ಬರುವುದರಿಂದ, ಕಾರವಾರ ಜಿಲ್ಲಾಧಿಕಾರಿಯವರು ಒಂದು ಪ್ರಸ್ತಾವನೆ ಸಲ್ಲಿಸಿದ್ದಾರೆ. ಜೋಯಿಡಾ ತಾಲ್ಲೂಕನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತನೆ ಮಾಡಬೇಕೆಂದು ಅವರು ಕೇಳಿದ್ದಾರೆ. ಅದಕ್ಕಾಗಿ ಮುಂದಿನ ದಿನಗಳಲ್ಲಿ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಇದಕ್ಕಾಗಿ DMA ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದ್ದೇವೆ. ಅವರು ಈಗ ಇದರ ಬಗ್ಗೆ ಸ್ಟಡಿ ಮಾಡುತ್ತಿದ್ದಾರೆ. ಅಲ್ಲಿಂದ ವರದಿ ಬಂದ ನಂತರ ಖಂಡಿತವಾಗಿ ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಸುನೀಲ್ ವಿ.ಹೆಗಡೆ: ನಾನು ಏನು ಕೇಳುತ್ತೇನೆಂದರೆ, ರಾಮನಗರ, ಇದು ನಮ್ಮ ಸೂಪಾ ಡ್ಯಾಂ ಮುಳುಗಡೆಯಾದ ನಂತರ ಶಿಫ್ಟ್ ಆದ ಗ್ರಾಮಪಂಚಾಯಿತಿ. ಇಲ್ಲಿ ಕುಡಿಯುವುದಕ್ಕೆ ನೀರಿನ ಸಮಸ್ಯೆ ಜೊತೆಗೆ ಬೇರೆ ಎಲ್ಲಾ ಸಮಸ್ಯೆಯಿದೆ. ಗ್ರಾಮ ಪಂಚಾಯಿತಿಯಿಂದ ಸುಧಾರಣೆಯಾಗುತ್ತಿಲ್ಲ. ಜನರಿಗೂ ತೊಂದರೆಯಾಗುತ್ತಿದೆ. ಆದ್ದರಿಂದ ಮಾನ್ಯ ಸಚಿವರು ಅದನ್ನು ಸಹ ಪಟ್ಟಣ ಪಂಚಾಯಿತಿ ಮಾಡುವ ನಿಟ್ಟಿನಲ್ಲಿ ಪರಿಗಣಿಸಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಇದು ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರ. because I told that there is proposal with the concerned department ಆ ಮಂತ್ರಿಗಳ ಜೊತೆಗೆ ಇವೆ. ಯಾವ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮಾಡಬೇಕು, ಯಾವ ಪಟ್ಟಣ ಪಂಚಾಯಿತಿಗಳನ್ನು ಮುನಿಸಿ ಪಾಲಿಟಿಗಳಾಗಿ ಮಾಡಬೇಕೆನ್ನುವ ಬಗ್ಗೆ ಚರ್ಚೆ ನಡೆಯುತ್ತಿದೆ. ನಾವು ಕೂಡ ಟಿ.ನರಸೀಪುರವನ್ನು ಮುನಿಸಿಪಾಲಿಟಿಯನ್ನಾಗಿ ಮಾಡಬೇಕೆಂದು ಹೇಳಿದ್ದೇವೆ. ನೀವು ಮಾಡುವಾಗ ಇಡೀ ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳು ಯಾವ್ಯಾವು ನಾರ್ಮ್ಸ್‌ದೊಳಗೆ ಅರ್ಹತೆಗೆ ಬಂದಿವೆ, those which are qualifying under the norms, under the guidelines ಆ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮಾಡಬೇಕು. ಯಾವ ಪಟ್ಟಣ ಪಂಚಾಯಿತಿಗಳು ಆ ನಾರ್ಮ್ಸ್‌ದೊಳಗೆ ಬರುತ್ತವೆ, ಏಕೆಂದರೆ, ಆ ಪಟ್ಟಣ ಪಂಚಾಯತಿಗಳಿಗೆ ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳನ್ನು ಸೇರಿಸಿಕೊಂಡು ಮುನಿಸಿ ಪಾಲಿಟಿಯನ್ನಾಗಿ ಮಾಡಬೇಕೆಂದು ಇದೆ. ಈ ತರಹದ ಅನೇಕ ಪಟ್ಟಣ ಪಂಚಾಯಿತಿಗಳಿವೆ. ಪಟ್ಟಣ ಪಂಚಾಯಿತಿಗಳನ್ನು ಮುನಿಸಿ ಪಾಲಿಟಿಯನ್ನಾಗಿ ಮಾಡುವಾಗ, ಈ ನಾರ್ಮ್ಸ್‌ಗಳು, ಗೈಡ್‌ಲೈನ್ಸ್, ಕಾನೂನು ಚೌಕಟ್ಟಿನೊಳಗೆ ಏನು ಇವೆ, ಅದನ್ನು ಅನುಸರಿಸಿ ಮಾಡಬೇಕು. ಅದು ಬಿಟ್ಟು ಯಾರೋ ಹೇಳಿದರು, ನಮ್ಮ ಪಕ್ಷದವರು ಹೇಳಿದರು, ಇನ್ಯಾವುದೋ ಪಕ್ಷದವರು ಹೇಳಿದರು, ಸ್ನೇಹಿತರು ಹೇಳಿದರು ಎಂದು ಇದನ್ನು ಮಾನದಂಡವನ್ನಾಗಿ ಇಟ್ಟುಕೊಳ್ಳದೇ, ಏನು ನಮ್ಮಲ್ಲಿ ನಾರ್ಮ್ಸ್ ಇದೆ, ಗೈಡ್‌ಲೈನ್ಸ್ ಇದೆ, ಅದನ್ನು ಮಾನದಂಡವನ್ನಾಗಿ ಇಟ್ಟುಕೊಂಡು ಮಾಡಬೇಕೆಂಬುದು ನನ್ನ ಸಲಹೆ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿದ್ದರಾಮಣ್ಣನವರು ಒಂದು ಸಲಹೆ ಕೊಟ್ಟಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು 247 ಪ್ರದೇಶಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಕಳುಹಿಸಿ, ಇಂಥ ಪ್ರಸ್ತಾವನೆಗಳು ಇವೆ, ಯಾವುದನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬೇಕೆಂದು ಅವರ ಅಭಿಪ್ರಾಯ ಕೇಳಿದ್ದಾರೆ. ಅವರು ನಮ್ಮ ಅಭಿಪ್ರಾಯ ಕೇಳಿದ್ದಾರೆ. ಈಗಾಗಲೇ ನಮ್ಮ ಕಾರ್ಯದರ್ಶಿ, Director of Municipal Administration ರವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿ ಈ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಏಕೆಂದರೆ ಬಂದಿರತಕ್ಕಂಥ 247 ಪ್ರಸ್ತಾವನೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಎಲ್ಲವೂ ನಿಗದಿತ ಮಾನದಂಡದೊಳಗೆ ಬರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೇನು ಸಲಹೆ ಕೊಟ್ಟಿದ್ದಾರೆ, ಅದನ್ನು

ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಅಕ್ಟೋಬರ್–ನವೆಂಬರ್ ನಲ್ಲಿ ಖಂಡಿತವಾಗಿ ಸರ್ಕಾರ ಅಂತಿಮವಾಗಿ ಒಂದು ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು: ಸಾಕು ಬಿಡಿ ಹೆಗಡೆಯವರೆ, guidelines ಪ್ರಕಾರ ಕೊಟ್ಟರೆ ಮಾಡುತ್ತೇವೆಂದು ಹೇಳಿದ್ದೀರಲ್ಲಾ ಬಿಡಿ, ಜನರಲ್ ಅಗಿ ಎಲ್ಲರಿಗೂ ಅಪ್ಲೈ ಆಗುತ್ತದೆ.

ಶ್ರೀ ಸುನೀಲ್ ವಿ.ಹೆಗಡೆ: ಜೋಯಿಡಾ ತಾಲ್ಲೂಕಿಗೆ ಜನಸಂಖ್ಯೆಯ ಮಿತಿಯನ್ನು ಸಡಿಲಗೊಳಿಸಬೇಕಾಗುತ್ತದೆ. ಏಕೆಂದರೆ, ಅಲ್ಲಿ 83% ಗುಡ್ಡಗಾಡು ಪ್ರದೇಶವಿರುವುದರಿಂದ ಈ ಗೈಡ್‌ಲೈನ್ಸ್‌ನಲ್ಲಿ ಸಡಿಲಿಕೆ ಕೊಟ್ಟಿಲ್ಲವೆಂದರೆ ಜೋಯಿಡಾ ತಾಲ್ಲೂಕು ಯಾವಾಗಲೂ ಪಟ್ಟಣ ಪಂಚಾಯಿತಿ ಆಗಲಿಕ್ಕೆ ಸಾಧ್ಯವಿಲ್ಲ. ದಯವಿಟ್ಟು ಜೋಯಿಡಾ ತಾಲ್ಲೂಕಿಗೆ ಹಿಂದುಳಿದ ತಾಲ್ಲೂಕಿಗೆ ಸ್ವಲ್ಪ ರಿಯಾಯಿತಿ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು: ಅದನ್ನು ಪರಿಶೀಲಿಸಿರಿ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಸನ್ಮಾನ್ಯ ಸಭಾದ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಇದನ್ನು ನಾವು ಖಂಡಿತವಾಗಿ ಪರಿಶೀಲನೆ ಮಾಡುತ್ತೇವೆ.

47(489) ಶ್ರೀ.ದಿನಕರ ಕೇಶವ ಶೆಟ್ಟಿ (ಕುಮಟ)

ಪೌರಾಡಳಿತ ಸಚಿವರು

ಅ) ಕುಮಟಾ ತಾಲ್ಲೂಕಿನ ಗೋಕರ್ಣವನ್ನು ಪಟ್ಟಣ ಪಂಚಾಯತಿಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಯವರು ಕುಮಟಾ ತಾಲ್ಲೂಕಿನ ಗೋಕರ್ಣವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯ ಕೋರಿರುತ್ತಾರೆ.

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3ರ ಉಪ ಕಲಂ (1)ರ (ಎ) (ಬಿ) (ಸಿ) (ಡಿ) (ಇ) ಮತ್ತು (ಎಫ್) ಮತ್ತು ಕಲಂ 9ರಲ್ಲಿ ಓದಿಕೊಂಡಂತೆ ಕಲಂ 349ರನ್ವಯ ಯಾವುದೇ ಒಂದು ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಲು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1. ಅಂತಹ ಪ್ರದೇಶದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವುದನ್ನು;
2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕು ನೂರಕ್ಕಿಂತ ಕಡಿಮೆಯಿಲ್ಲದಿರುವುದನ್ನು;
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದನ್ನು.